ಉದಯವಾಣಿ
ಕನ್ನಡ ದಿನಪತ್ರಿಕೆ

Friday, January 15th, 2010

# ಭ್ರಷ್ಟ ಸಚಿವರ ಮೇಲೂ ದಾಳಿಗೆ ಸಿದ್ಧ: ಸಂತೋಷ ಹೆಗ್ಡೆ

ಬೆಂಗಳೂರು, ಜ. 14: 'ಸಚಿವರು ಭ್ರಷ್ಟಾಚಾರದಲ್ಲಿ ತೊಡಗಿದ್ದರೆ ಅವರ ಮೇಲೆ ದಾಳಿ ಮಾಡಲು ಸಿದ್ಧ' ಎಂದು ಲೋಕಾಯುಕ್ತ ನ್ಯಾ। ಸಂತೋಷ ಹೆಗ್ಡೆ ಹೇಳಿದರು.

ಭಗವಾನ್ ಮಹಾವೀರ ಜೈನ್ ಕಾಲೇಜಿನ ಕನ್ನಡ ವೇದಿಕೆ ಹಮ್ಮಿಕೊಂಡಿದ್ದ ಪ್ರಸ್ತುತ ಸ್ಥಿತಿಗತಿ ಕುರಿತು ಸಂವಾದದಲ್ಲಿ ವಿದ್ಯಾರ್ಥಿಗಳ ಪ್ರಶ್ನೆಗೆ ಉತ್ತರಿಸಿದ ಅವರು, ಹುರುಳಿರುವ ಪುರಾವೆ ಸಿಕ್ಕಿದಾಕ್ಷಣ ಸಂಪುಟ ದರ್ಜೆ ಮಂತ್ರಿಯಿದ್ದರೂ ದಾಳಿಯೇ ಮಾಡಿಯೇ ಮಾಡುತ್ತೇನೆ. ನಿಮ್ಮ ಬಳಿ ಯಾವುದಾದರೂ ಮಾಹಿತಿ ಇದ್ದರೆ ಕೊಡಿ. ಈಗಾಗಲೇ ಶಾಸಕರೊಬ್ಬರ ಮೇಲೆ ದಾಳಿ ನಡೆಸಿ ರಾಷ್ಟ್ರದಲ್ಲೇ ಮೊದಲ ಬಾರಿಗೆ ಜನಪ್ರತಿನಿಧಿಗಳೊಬ್ಬರನ್ನು ಬಂಧಿಸಲಾಗಿದೆ. ಮಂತ್ರಿಗಳಾದರೂ ಅವರನ್ನು ಬಿಡುವ ಪ್ರಮೇಯ ಇಲ್ಲ ಎಂದರು.

ಲಂಚ ಪ್ರಕರಣದಲ್ಲಿ ಸಿಕ್ಕಿಬಿದ್ದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಇಲಾಖೆಯ ಅನುಮತಿ ಬೇಕು. ಆದರೆ ಅನೇಕ ಇಲಾಖೆಗಳಲ್ಲಿ ಇದನ್ನು ಕೊಡುವುದೇ ಇಲ್ಲ. ಅದರಲ್ಲೂ ಲೋಕೋಪಯೋಗಿ ಇಲಾಖೆಯಲ್ಲಿ ಅನುಮತಿ ನೀಡಿದ ನಿದರ್ಶನವೇ ಇಲ್ಲ. 2 ದಿನ ಅಮಾನತು ಮಾಡಿ ಆಮೇಲೆ ಅದೇ ಹುದ್ದೆಯಲ್ಲಿ ಮುಂದುವರೆಸುತ್ತಾರೆ. ಭ್ರಷ್ಟಾಚಾರ ಪ್ರಕರಣದಲ್ಲಿ ಭಾಗಿಯಾಗಿ ಅಮಾನತುನಲ್ಲಿರುವ 100 ಇಂಜಿನಿಯರ್‌ಗಳ ಸೇವೆಯನ್ನು ಕ್ರಮಬದ್ಧಗೊಳಿಸಲು ಲೋಕೋಪಯೋಗಿ ಇಲಾಖೆ ಮುಂದಾಗಿದೆ. ಪ್ರಕರಣ ನಡೆದ 2 ತಿಂಗಳಾಗಿದ್ದು ವಿಚಾರಣೆ ಪ್ರಗತಿಯಲ್ಲಿರುವಾಗ ಈ ರೀತಿ ಮಾಡುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಬೆಂಗಳೂರಿನ ಮಹಾವೀರ್ ಜೈನ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಜಾಗೃತಿ ಹಬ್ಬ ಉದ್ಘಾಟಿಸಿದ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್‌ಹೆಗ್ಡೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಜೈನ್ ಶಿಕ್ಷಣ ಸಮೂಹ ಅಧ್ಯಕ್ಷ ಚೆನ್ನರಾಜ್ ಜೈನ್ ಉಪಸ್ಥಿತರಿದ್ದರು.

**ಸಯಾಮಿ ಅವಳಿ:** ರಾಜಕಾರಣಿಗಳು ಹಾಗೂ ಸರ್ಕಾರಿ ನೌಕರರು ಭ್ರಷ್ಟಾಚಾರದ ಸಯಾಮಿ ಅವಳಿಗಳು. ಒಬ್ಬರಿಲ್ಲದೇ ಇನ್ನೊಬ್ಬರು ಬದುಕಲು ಸಾಧ್ಯವಿಲ್ಲ. ಇವರಿಬ್ಬರೂ ಸೇರಿ ಮಾಡುತ್ತಿರುವ ಭ್ರಷ್ಟಾಚಾರ - ದುರಾಡಳಿತ ಸಮಾಜಕ್ಕೆ ಪೀಡೆಯಾಗಿದೆ. ಸ್ವಾತಂತ್ರ್ಯನಂತರದ 63 ವರ್ಷದಲ್ಲಿ ಇವೆರೆಡೇ ಅಭಿವೃದ್ಧಿಯಾಗಿದೆ ಎಂದರು.